3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

S.C.78/2024

ದಿಃ 12.09.2025
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

CW-1 Pw-1

| | | |
|---|---|---|
| ಹೆಸರು | ಃ | ಹೇಮಲತಾ ಕೆ ಎಸ್ |
| ಗಂಡನ ಹೆಸರು | ಃ | ಪವನ್ ಕುಮಾರ್ |
| ವಯಸ್ಸು | ಃ | 21 ವರ್ಷ |
| ಉದ್ಯೋಗ | ಃ | ಗೃಹಿಣಿ |
| ವಾಸಸ್ಥಳ | ಃ | ಕೋಣನಕುಂಟೆ, ಬೆಂಗಳೂರು |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ಮೃತ ಇಂದಿರಮ್ಮ ನನ್ನ ತಾಯಿ. ನ್ಯಾಯಾಲಯದ ವಿ ಸಿ ಮೂಲಕ ತೋರಿಸಿದಂತ ವ್ಯಕ್ತಿ ಈ ಪ್ರಕರಣದ ಆರೋಪಿ ನನ್ನ ತಂದೆ. ದಿಃ 31.05.2024 ರಂದು ನಾನು ಬೆಳಿಗ್ಗೆ 11.00 ಗಂಟೆಗೆ ಕಾಲೇಜಿಗೆ ಹೋಗಿದ್ದೆ. ಆಗ ಮನೆಯಲ್ಲಿ ನನ್ನ ತಂದೆ ಇದ್ದರು. ನನ್ನ ತಾಯಿ ಹಸು ಸಾಕಿಕೊಂಡು ಮನೆಯಲ್ಲಿಯೇ ಇರುತ್ತಿದ್ದರು. ಅಂದು ನಾನು ಕಾಲೇಜಿಗೆ ಹೋಗುವುದಕ್ಕಿಂತ ಮೊದಲು ನಾನು ಸ್ನಾನದ ಮನೆಯಲಿದ್ದಾಗ ನನ್ನ ತಾಯಿ ತಾನು ಹಸುವಿಗೆ ಹುಲ್ಲು ತರಲು ಕೆಳಗೆ ಹೋಗುತ್ತೇನೆ ಎಂದು ಹೇಳಿ ಹೋದರು. ನಾನು ಮನೆಗೆ ಬಾಗಿಲು ಹಾಕಿ ಕಾಲೇಜಿಗೆ ಹೋದೆ. ಅಂದು ನನಗೆ ಹುಷಾರಿಲ್ಲದೇ ಇದ್ದ ಕಾರಣ ನಾನು ಕಾಲೇಜಿನಿಂದ ಆಸ್ಪತ್ರೆಗೆ ಹೋಗಿ ರಾತ್ರಿ ಸುಮಾರು 8.00 ಗಂಟೆ ಸಮಯದಲ್ಲಿ ಬಸ್ ನಿಲ್ದಾಣದಲ್ಲಿದಾಗ ನನ್ನ ತಾಯಿ ತೀರಿಕೊಂಡಿದ್ದಾರೆ ಎಂದು ನನಗೆ ಫೋನ್ ಕರೆ ಬಂತು. ನಾನು ಮನೆಗೆ ಬಂದಾಗ ಅಲ್ಲಿ

ಜನ ಸೇರಿದ್ದರು. ಪೊಲೀಸರು ಬಂದ ನಂತರ ನನ್ನ ತಾಯಿ ಸತ್ತಂತ ಜಾಗಕ್ಕೆ ಅಂದರೆ ನಮ್ಮ ತೋಟಕ್ಕೆ ಕರೆದುಕೊಂಡು ಹೋದರು. ಅಲ್ಲಿ ನನ್ನ ತಾಯಿಯನ್ನು ನೋಡಿದೆ ಅವರು ಜೀವಂತ ಇರಲಿಲ್ಲ. ತಲೆಯಲ್ಲಿ, ಬಾಯಲ್ಲಿ, ಮೂಗಲ್ಲಿ ರಕ್ತ ಬರುತ್ತಿತ್ತು. ನನ್ನ ತಾಯಿಯನ್ನು ನೋಡಿ ಯಾರೋ ಆಕೆಯನ್ನು ಕೊಲೆ ಮಾಡಿದ್ದಾರೆ ಎಂದು ಅನಿಸಿತು. ನನ್ನ ತಂದೆ ಮನೆಯ ಬಳಿಯೇ ಇದ್ದರು. ನಂತರ ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು. ಅಲ್ಲಿ ಪೊಲೀಸರು ನನ್ನ ಸಹಿ ಪಡೆದುಕೊಂಡರು. ಸಾಕ್ಷಿ ದೂರಿನಲ್ಲಿರುವಂತ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಾನು ಪೊಲೀಸ್ ಠಾಣೆಗೆ ಹೋದಂತ ಸಮಯದಲ್ಲಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಸಾಕ್ಷಿ ತನ್ನ ಸಹಿ ಗುರುತಿಸಿರುವ ಕಾರಣ ದೂರನ್ನು ನಿಪಿಃ 1 ಎಂದು ಸಾಕ್ಷಿ ಸಹಿಯನ್ನು ನಿಪಿಃ 1ಎ ಎಂದು ಗುರುತಿಸಲಾಯಿತು. ನಂತರ ನನ್ನನ್ನು ಮನೆಗೆ ಕರೆದುಕೊಂಡು ಬಂದರು. ಮನೆಯ ಬಳಿ ಪೊಲೀಸರು ಇದ್ದರು. ನಂತರ ಪೊಲೀಸರು ಏನು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಸ್ವಯಂ ಹೇಳುತ್ತಾರೆ ಅಂದು ನನಗೆ ತುಂಬಾ ಹುಷಾರಿಲ್ಲದೇ ಇದ್ದ ಕಾರಣ ಗ್ಲೂಕೋಸ್ ಹಾಕಿಸಿಕೊಂಡು ಮನೆಗೆ ಬಂದಿದ್ದೆ. ಸಾಕ್ಷಿ ಸ್ಥಳ ಪಂಚನಾಮೆಯಲ್ಲಿರುವಂತ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಪಿಃ2 ಎಂದು ಸಾಕ್ಷಿ ಸಹಿಯನ್ನು ನಿಪಿಃ 2ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸಹ ನಾನು ಠಾಣೆಯಲ್ಲಿ ಮಾಡಿರುತೇನೆ. ಇದಾದ ನಂತರ ಮತ್ತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ**

**ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ವಿಶೇಷ ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)**

ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ.

2. ನನ್ನ ತಾಯಿ ಜಮೀನಿಗೆ ಹುಲ್ಲು ಕೂಯಿಲು ಹೋಗಿದ್ದಾಗ ಬೆಃ 10 ರಿಂದ ರಾತ್ರಿ 8 ಗಂಟೆ ಮಧ್ಯದಲ್ಲಿ ಯಾರೋ ಯಾವುದೋ ಕಾರಣಕ್ಕೆ ನನ್ನ ತಾಯಿ ಹುಲ್ಲನ್ನು ಕೊಯ್ಯುವಾಗ ಯಾವುದೋ ಬಲವಾದ ಆಯುಧದಿಂದ ನಮ್ಮ ತಾಯಿಯ ತಲೆ, ಹಣೆಗೆ ಹೊಡೆದು ಕೊಲೆ ಮಾಡಿರುತ್ತಾರೆ ಎಂದು ನಾನು ಪೊಲೀಸರಿಗೆ ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಂತರ ಪೊಲೀಸರು ಅದೇ ದಿನ ಅಂದರೆ ದಿನಾಂಕಃ 31.05.2024 ರಂದು ರಾತ್ರಿ 11 ರಿಂದ 12 ಗಂಟೆ ಸಮಯದಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ಸ್ಥಳ ಪಂಚನಾಮೆ ಬರೆದಿರುತ್ತಾರೆ ಎಂದರೆ ಸಾಕ್ಷಿ ಪೊಲೀಸರು ಬಂದಿರುತ್ತಾರೆ ಆದರೆ ಅಲ್ಲಿ ಬರಹಗಳನ್ನು ಮಾಡಿದ ವಿಚಾರ ನನಗೆ ತಿಳಿದಿರುವುದಿಲ್ಲ. ಸ್ಥಳದಲ್ಲಿ ರಕ್ತ ಮಿಶ್ರಿತ ಮಣ್ಣು, ಸಾದಾ ಮಣ್ಣು ಹಾಗೂ ಹುಲ್ಲಿನ ಮೇಲೆ ಇದ್ದಂತ ರಕ್ತದ ಮಾದರಿಯನ್ನು ಪೊಲೀಸರು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನಾನು ಸಹ ಸ್ಥಳದಲ್ಲಿದ್ದು ಅದನ್ನು ನೋಡಿ ಅದರ ಬಗ್ಗೆ ಬರವಣಿಗೆ ಮಾಡಿಕೊಂಡಾಗ ನಿಪಿಃ2 ಕ್ಕೆ ಅಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 01.06.2024 ರಂದು ಇದೇ ಘಟನೆಗೆ ಸಂಬಂಧಿಸಿದಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

3. ನನ್ನ ತಂದೆಗೆ ಮದ್ಯಪಾನ ಮಾಡುವ ಅಭ್ಯಾಸ ಇತ್ತು ಎಂದರೆ ಸರಿ. ಆ ಕಾರಣ ಅವರು ನನ್ನ ತಾಯಿಯ ಬಳಿ ಯಾವಾಗಲೂ ಜಗಳವಾಡುತ್ತಾ ಹಣ ಕೇಳುತ್ತಿದ್ದರು ಎಂದರೆ ಸರಿಯಲ್ಲ. ನಾನು ದೂರು ಕೊಡಲು ಹೋದಾಗ ನನ್ನ ತಂದೆ ಮನೆಯ ಬಳಿಯೇ ಇದ್ದು ನಾನು ದೂರು ಕೊಟ್ಟು ವಾಪಸ್ಸು ಆಗುವಾಗ ನನ್ನ ತಂದೆ ಮನೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಈ ವಿಚಾರಕ್ಕೆ ಸಂಬಂಧಿಸಿದಂತೆ ಈಗ ನನಗೆ ಓದಿ ಹೇಳಿರುವಂತೆ "ಅವರು ಮದ್ಯಪಾನ ಮಾಡಲು ------------ ---------------- ಠಾಣೆಗೆ ಕರೆಸಿ ವಿಚಾರಣೆ ಮಾಡಬೇಕು ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ. ಸದರಿ ಹೇಳಿಕೆಯ ಭಾಗವನ್ನು ನಿಪಿಃ3 ಎಂದು ಗುರುತಿಸಲಾಯಿತು. ತಾಯಿ ಹೇಗೂ ಇಲ್ಲ ಆದಕಾರಣ ಕತಂದೆ ಜೈಲಿನಲ್ಲಿರುವುದು ಬೇಡ ಎಂದು ಈಗ ನಾವೆಲ್ಲ ಮನೆಯಲ್ಲಿ ಮಾತನಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ನನ್ನ ತಂದೆಯಾಗಿರುವ ಕಾರಣ ಅವರ ಮೇಲಿನ ಅನುಕಂಪದಿಂದಾಗಿ ಅವರಿಗೆ ಆಗುವ ಶಿಕ್ಷೆಯನ್ನು ತಪ್ಪಿ ಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಶ್ರೀ. ಎನ್ ಎಲ್ ವಕೀಲರ ಪರವಾಗಿ ಶ್ರೀ ಕೆ ಎಸ್., ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
ಸಿ.ಸಿ.3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.